**ದಿನಾಂಕ 04.08.2009 ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ 237, 2ನೇ ಮಹಡಿ ವಿಧಾನ ಸೌಧ, ಬೆಂಗಳೂರಿನಲ್ಲಿ ನಡೆದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರಿನ 9ನೇ ಆಡಳಿತ ಮಂಡಳಿ ಸಭೆಯ ನಡುವಳಿಗಳು.**

**ಸಭೆಯಲ್ಲಿ ಹಾಜರಿದ್ದ ಸದಸ್ಯರು**

1. ಶ್ರೀ ರಾಮಚಂದ್ರಗೌಡರು — ಅಧ್ಯಕ್ಷರು
   ವೈದ್ಯಕೀಯ ಶಿಕ್ಷಣ ಸಚಿವರು
   ಕರ್ನಾಟಕ ಸರ್ಕಾರ, ಬೆಂಗಳೂರು.

2. ಶ್ರೀ ವಿ. ಉಮೇಶ್ — ಉಪಾಧ್ಯಕ್ಷರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈಶಿ),
   ಬೆಂಗಳೂರು.

3. ಶ್ರೀ ಶ್ರೀನಿವಾಸ ಆಚಾರಿ — ಸದಸ್ಯರು.
   ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
   ಆನಂದರಾವ್ ವೃತ್ತ, ಬೆಂಗಳೂರು.

4. ಶ್ರೀ ಅನೀಸ್ ಸೀರಾಜ್ — ಸದಸ್ಯರು
   ಹೆಚ್ಚುವರಿ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈಶಿ),
   ಬೆಂಗಳೂರು.

5. ಶ್ರೀ ಗಣೇಶ್ ಮೂರ್ತಿ — ಸದಸ್ಯರು
   ಸರ್ಕಾರದ ಉಪ ಕಾರ್ಯದರ್ಶಿಗಳು
   ಆರ್ಥಿಕ ಇಲಾಖೆ, ಬೆಂಗಳೂರು.

6. ಡಾ. ಎ. ಆರ್. ಅರುಣಾ — ಸದಸ್ಯರು.
   ನಿರ್ದೇಶಕರು ವೈದ್ಯಕೀಯ ಶಿಕ್ಷಣ, ಬೆಂಗಳೂರು.

7. ಬಿ. ಸುರೇಂದ್ರ ಬಾಬು, ಕಾರ್ಯಪಾಲಕ ಅಭಿಯಂತರರು, — ಸದಸ್ಯರು
   ಮುಖ್ಯ ಅಭಿಯಂತರರು ಸಿ ಅಂಡ್ ಬಿ ಉತ್ತರ,
   ಧಾರವಾಡ ಪರವಾಗಿ

8. ಡಾ. ಟಿ.ಎಂ. ನಟರಾಜ್ — ಸದಸ್ಯರು
   ವೈದ್ಯಕೀಯ ಅಧೀಕ್ಷಕರು, ಭೋಧಕ ಆಸ್ಪತ್ರೆ, ರಾಯಚೂರು.

9. ಶ್ರೀ ಶಿವ ಕುಲಕರ್ಣಿ — ಸದಸ್ಯರು
   ಮುಖ್ಯ ಆಡಳಿತಾಧಿಕಾರಿಗಳು, ರಾ.ವೈ.ವಿ.ಸಂ., ರಾಯಚೂರು

10. ಡಾ. ರಾಮಯ್ಯ — ಸದಸ್ಯ ಕಾರ್ಯದರ್ಶಿ
    ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
    ರಾಯಚೂರು.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ, ಅಧ್ಯಕ್ಷರಾದ ಸನ್ಮಾನ್ಯ ಶ್ರೀ ರಾಮಚಂದ್ರಗೌಡರುವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯಲ್ಲಿ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.

**ವಿಷಯ ಸಂಖ್ಯೆ 1 :**

ದಿನಾಂಕ 08.09.008 ರಂದು ಜರುಗಿದ 8ನೇ ಆಡಳಿತ ಮಂಡಳಿಯ ಸಭೆಯ ನಡುವಳಿಗಳನ್ನು ಓದಿ ದಾಖಲಿಸಲಾಯಿತು. ಹಿಂದಿನ ಸಭೆಯನ್ನು ದಿನಾಂಕ 08.09.2008ರಂದು ಜರುಗಿಸಿದ್ದು, ಈವರೆಗೆ ಆಡಳಿತ ಮಂಡಳಿ ಸಭೆಯನ್ನು ಜರುಗಿಸಿಲ್ಲ. ಸಂಸ್ಥೆಯ ಬೈಲಾಗಳ ಪ್ರಕಾರ ಕನಿಷ್ಠ 3 ತಿಂಗಳಿಗೊಂದುಸಲದಂತೆ ಸಂಸ್ಥೆಯ ಆಡಳಿತ ಮಂಡಳಿ ಸಭೆಯನ್ನು ಜರುಗಿಸಬೇಕೆಂದು ಸೂಚಿಸಲಾಯಿತು. ಈ ಅಂಶಗಳೊಂದಿಗೆ ಹಿಂದಿನ ಸಭೆಯ ನೆಡುವಳಿಯ ಕುರಿತು ಸಲ್ಲಿಸಿದ ಅನುಪಾಲನಾ ವರದಿಯನ್ನು ಅನುಮೋದಿಸಿದೆ. ಭಾರತೀಯ ವೈದ್ಯಕೀಯ ಮಂಡಳೀಯ ನಿಯಮಾನುಸಾರ ಈ ಕೆಳಕಂಡ ವಿವರಗಳ ವರದಿಯನ್ನು ಸಲ್ಲಿಸಲು ಸೂಚಿಸಿದೆ.

| ಕ್ರಮ ಸಂಖ್ಯೆ | ಎಂ.ಸಿ.ಐ ಅವಶ್ಯಕತೆ | ಈಗಾಗಲೇ ನಿರ್ಮಿಸಿದ ಕಟ್ಟಡ ಕಾಮಗಾರಿ ಖರೀದಿಸಿದ ವಸ್ತು ಮಾಡಿದ ನೇಮಕಾತಿ | ಉದ್ದೇಶಿತ ಕಾಮಗಾರಿ ವೆಚ್ಚ, ಖರೀದಿ & ನೇಮಕಾತಿ |
|---|---|---|---|
| 1 | ಕಟ್ಟಡ | | |
| 2 | ಉಪಕರಣಗಳು | | |
| 3 | ಸಿಬ್ಬಂದಿ | | |

**ವಿಷಯ ಸಂಖ್ಯೆ 2 :**

2008–09 ಮತ್ತು 2009–10ನೇ ಸಾಲಿನ ಆಯ–ವ್ಯಯವನ್ನು ಪರಿಶೀಲಿಸಲಾಯಿತು. 2008 ಮತ್ತು 2009ರಲ್ಲಿ ಒಟ್ಟು ರೂ. 3575 ಲಕ್ಷಗಳು ಸರ್ಕಾರದಿಂದ ಜಮೆಯಾಗಿದ್ದು , 01.04.2008 ರಂದು ಇರುವ ಪ್ರಾರಂಭಿಕ ಸಂದಾಯ ರೂ. 1052 ಲಕ್ಷ ಒಟ್ಟು ರೂ. 4652 ಲಕ್ಷಗಳ ಮೊತ್ತ ಇದ್ದು ಇದರಲ್ಲಿ ವಿವರಣೆ ಪ್ರಕಾರ ಕಟ್ಟಡ, ವೇತನ, ಇತರ ಖರ್ಚು ಒಟ್ಟು ಸೇರಿ ರೂ. 4023 ಲಕ್ಷ ವೆಚ್ಚವಾಗಿರುತ್ತದೆ ಹಾಗೂ ರೂಪಾಯಿ ರೂ. 1786 ಲಕ್ಷ ಮೊತ್ತವು 31.03.2009ರ ಅಂತಿಮ ಶಿಲ್ಕು ಆಗಿರುತ್ತದೆ. ತದನಂತರ 2009–10ನೇ ಸಾಲಿನಲ್ಲಿ ಅಂದರೆ ಈ ಹಣಕಾಸಿನ ವರ್ಷ 01.04.2009 ರಿಂದ 30.06.2009 ರ ವರೆಗಿನ ಅಯ–ವ್ಯಯವನ್ನು ಗಮನಿಸಲಾಗಿ, ಈ ವರ್ಷದ ಪ್ರಾರಂಭಿಕ ಶಿಲ್ಕು ರೂ. 1786 ಲಕ್ಷ ಇದ್ದು , ಈ ಅವಧಿಯಲ್ಲಿ ರೂಪಾಯಿ 954 ಲಕ್ಷಗಳು ಸರ್ಕಾರದಿಂದ ಜಮೆಯಾಗಿದ್ದು ಸದರಿ ಅವಧಿಯಲ್ಲಿ ಕಟ್ಟಡ ವೆಚ್ಚ , ಸಿಬ್ಬಂದಿ ವೇತನ ಮತ್ತಿತರ ವೆಚ್ಚ ಒಟ್ಟು ರೂಪಾಯಿ 698 ಲಕ್ಷಗಳು ವೆಚ್ಚವಾಗಿದ್ದು , ಈ ವರ್ಷದ ಒಂದನೇ ತ್ರೈಮಾಸಿಕ ಅಂತ್ಯಕ್ಕೆ ರೂಪಾಯಿ 1297 ಲಕ್ಷಗಳು ಅಂತಿಮ ಶಿಲ್ಕು ಇರುತ್ತದೆ. ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿ ಈ ವಿಷಯದಲ್ಲಿ ಮಂಡಿಸಿದ ಅಯ–ವ್ಯಯಗಳ ಪಟ್ಟಿಯನ್ನು ಅನುಮೋಧಿಸಲಾಯಿತು.

ಅ) ಸಂಸ್ಥೆಯ ನಿರ್ದೇಶಕರು ಸೆಪ್ಟಂಬರ್ 2008ರಿಂದ ಜೂನ್ 2009ರ ವರೆಗಿನ ಅವಧಿಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯ ಪರಿವೀಕ್ಷಣೆಗೆ ಹಾಗೂ 2ನೇ ವರ್ಷದ ನವೀಕರಣಕ್ಕೆ ಅಗತ್ಯವಿರುವ ಉಪಕರಣಗಳನ್ನು ಖರೀದಿಸಿದ ಬಗ್ಗೆ ವಿವರಣೆ ನೀಡಿದರು.

| | 2008ರಲ್ಲಿ | 2009ರಲ್ಲಿ (30 ಜೂನ್ 2009ರ ವರೆಗೆ) | ಒಟ್ಟು |
|---|---|---|---|
| ಉಪಕರಣ | 71,32,161 | 43,52,761 | 1,14,84,922 |
| ಪೀಠೋಪಕರಣ | 15,19,785 | 8,17,372 | 23,37,157 |
| ರಸಾಯನಿಕ | 4,83,135 | 2,45,941 | 72,99,075 |
| ಪುಸ್ತಕಗಳು | 35,55,812 | – | 35,55,812 |
| **ಒಟ್ಟು** | **1,26,90,892** | **54,16,074** | **1,81,06,966** |

ಈ ಬಗ್ಗೆ ಸಂಬಂಧಿಸಿದ ಉಪಕರಣ, ಪೀಠೋಪಕರಣ, ರಸಾಯನಿಕ ಮತ್ತು ಪುಸ್ತಕಗಳ ಪಟ್ಟಿಯನ್ನು ಪರಿಶೀಲಿಸಲಾಯಿತು. ನಿಯಮಗಳ ಪಾಲನೆ ಬಗ್ಗೆ ಪರಿಶೀಲಿಸಲಾಯಿತು. ಚುನಾವಣೆ ನೀತಿ ಸಂಹಿತೆ ಪ್ರಯುಕ್ತ ಟೆಂಡರ್ ಕರೆಯದೆ ಬೆಂಗಳೂರು, ಹಾಸನ ಹಾಗೂ ಇತರ ವೈದ್ಯಕೀಯ ಸಂಸ್ಥೆಗಳು ಖರೀದಿಸಿದ ದರದಲ್ಲಿ ಉಪಕರಣಗಳನ್ನು ಖರೀದಿಸಲಾಗಿದೆ.

ಈಗಾಗಲೇ ಹೊಂದಿರುವ ಉಪಕರಣಗಳ ಪಟ್ಟಿಯನ್ನು ಪರಿಶೀಲಿಸಿ ಅವುಗಳ ಗುಣಮಟ್ಟ ಕುರಿತು ಪರಿಶೀಲನಾ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು. ಟೆಂಡರ್ ಮೂಲಕ ನಿಯಮಗಳನ್ನು ಪಾಲಿಸಿ ಖರೀದಿಸಲು ಸೂಚಿಸಲಾಯಿತು. ಈ ಬಗ್ಗೆ ಸ್ಪಷ್ಟವಾದ ವಿವರಣೆಯನ್ನು ನೀಡಲು ಸೂಚಿಸಲಾಯಿತು ಹಾಗೂ ಸದರಿ ಪಟ್ಟಿಗೆ ಅನುಮೋದನೆ ನೀಡಲಾಯಿತು.

**ವಿಷಯ ಸಂಖ್ಯೆ 3 :**

ಸನ್ 2009–10ನೇ ಸಾಲಿನ ಉದ್ದೇಶಿತ ಆಯ–ವ್ಯಯ (ಬಜೆಟ್) ಮಂಡಿಸಿದ್ದನ್ನು ಪರಿಶೀಲಿಸಲಾಯಿತು. 2008–09ರಲ್ಲಿ ಕಟ್ಟಡ ಕಾಮಗಾರಿ, ಸಿಬ್ಬಂದಿ ವೆಚ್ಚ ಮತ್ತಿತರ ವೆಚ್ಚಗಳು ಸೇರಿ ಒಟ್ಟು 3913 ಲಕ್ಷ ವೆಚ್ಚವಾಗಿದ್ದು & ಈ ವರ್ಷ ಎಲ್ಲಾ ಉದ್ದೇಶಿತ ವೆಚ್ಚಗಳ ವಿವರವನ್ನು ಕ್ರೋಢಿಕರಿಸಿ 7595 ಲಕ್ಷಗಳ ಅಂದಾಜು ವೆಚ್ಚವನ್ನು ಕೋರಿದ್ದು, ಇವರು 2009–10ನೇ ಸಾಲಿನ ಉದ್ದೇಶಿತ ಆಯ–ವ್ಯಯ (ಬಜೆಟ್)ಗೆ ಒಪ್ಪಿಗೆ ನೀಡಲಾಯಿತು.

**ವಿಷಯ ಸಂಖ್ಯೆ 4 :**

ಅ) ಭಾರತೀಯ ವೈದ್ಯಕೀಯ ಪರಿಷತ್ತಿನಿಂದ 2ನೇ ನವೀಕರಣಕ್ಕೆ ಒಟ್ಟು 156 ಬೋಧಕ ಸಿಬ್ಬಂದಿಗಳ ಅವಶ್ಯಕತೆ ಪ್ರಕಾರ ಈವರೆಗೆ ಒಟ್ಟು 156 ಬೋಧಕ ಸಿಬ್ಬಂದಿಗಳ ನೇಮಕಾತಿ ಮಾಡಿದ್ದನ್ನು ಗಮನಿಸಲಾಯಿತು. ವೃಂದವಾರು ಈ ಕೆಳಗೆ ವಿವರಿಸಿದಂತೆ ಈಗಾಗಲೇ ಒಟ್ಟು ನೇಮಕಾತಿ ಮಾಡಿದ ವಿವರ ಈ ಕೆಳಗಿನಂತಿದೆ.

| | | |
|---|---|---|
| 1) ಪ್ರಾಧ್ಯಾಪಕರು | – | 09 |
| 2) ಸಹ ಪ್ರಾಧ್ಯಾಪಕರು | – | 15 |
| 3) ಸಹಾಯಕ ಪ್ರಾಧ್ಯಾಪಕರು | – | 41 |
| 4) ಬೋಧಕರು / ಶಿಕ್ಷಕರು | – | 27 |
| 5) ಹಿರಿಯ ಸ್ಥಾನಿಕರು | – | 23 |
| 6) ಕಿರಿಯ ಸ್ಥಾನಿಕರು | – | 41 |
| **ಒಟ್ಟು** | – | 156 |

ಈ ಅವಧಿಯಲ್ಲಿ41 ಜನ ಬೋಧಕ ಸಿಬ್ಬಂದಿಯವನ್ನು ನೇರ ಸಂದರ್ಶನದ (Walk-in Interview) ಹಾಗು 40 ಜನ ಬೋಧಕ ಸಿಬ್ಬಂದಿಯವರನ್ನು ಆಹ್ವಾನದ ಮೂಲಕ (By Invitation) ನೇಮಕಾತಿ ಮಾಡಲಾಗಿ ನಿಯಮಾನುಸಾರ ನೇಮಕಾತಿ ಕೈಗೊಳ್ಳಲಾಯಿತು. ಮೀಸಲಾತಿ ನಿಯಮಗಳನ್ನು ಅನುಸರಿಸಿ ಸಂಸ್ಥೆಯ ನಿಯಮಾವಳಿ ಪ್ರಕಾರ ನೇಮಕಾತಿ ಸಮಿತಿ ಮೂಲಕ ಮಾಡಿದ ಬಗ್ಗೆ ಕಟ್ಟು ನಿಟ್ಟಾಗಿ ಕ್ರಮ ಜರುಗಿಸುವಂತೆ ಸೂಚಿಸಿ ಸದರಿ ಅವಧಿಯಲ್ಲಿ ಲಗತ್ತಿಸಿದ ಪಟ್ಟಿಯ ಪ್ರಕಾರ ಮಾಡಿದ ಒಟ್ಟು 81 ಜನ ಬೋಧಕ ಸಿಬ್ಬಂದಿಯ ನೇಮಕಾತಿಗೆ ಅನುಮೋದನೆ ನೀಡಲಾಯಿತು.

ಪ್ರಸಕ್ತ ವರ್ಷದಲ್ಲಿ ಭಾರತೀಯ ವೈದ್ಯಕೀಯ ಮಂಡಳಿ ನಿಯಮ ಪ್ರಕಾರ ಮತ್ತು ಸರ್ಕಾರದ ಪೂರ್ವ ಅನುಮತಿಯೊಂದಿಗೆ 100 ಜನ ಶುಶ್ರೂಷಕರು ಮತ್ತು 39 ಜನ ಪ್ರಯೋಗಾಲಯ ತಾಂತ್ರಿಕ ಸಿಬ್ಬಂದಿ ನೇಮಕಾತಿ ಮಾಡಲಾಗಿದೆ. ಪತ್ರಿಕಾ ಪ್ರಕಟಣೆ ಮೂಲಕ, ಸ್ಪರ್ಧಾತ್ಮಕ ಪರೀಕ್ಷೆ ಜರುಗಿಸಿ, ಅರ್ಹತೆ ಮತ್ತು ಮೀಸಲಾತಿ ನಿಯಮಗಳ ಪಾಲನೆ ಮಾಡಿದ್ದು , ಈ ಪೈಕಿ 73 ಜನ ಶುಶ್ರೂಷಕರು ಹಾಗೂ 39 ಜನ ಪ್ರಯೋಗಶಾಲಾ ತಾಂತ್ರಿಕರು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈ ಕುರಿತು ವಿವರಗಳನ್ನು ಪರಿಶೀಲಿಸಲಾಯಿತು. ~~ಈ ಕುರಿತು ವಿವರಗಳನ್ನು ಪರಿಶೀಲಿಸಲಾಯಿತು.~~ ನೇಮಕಾತಿಯಲ್ಲಿ ಬೇರೆ ಸ್ಥಳದಿಂದ ಆಯ್ಕೆಯಾದ ಅಭ್ಯರ್ಥಿಗಳು ರಾಯಚೂರಿನಲ್ಲಿ ಭೌಗೋಳಿಕ ಕಾರಣದಿಂದ ಬಹಳ ದಿನಗಳವರೆಗೆ ಸೇವೆ ಸಲ್ಲಿಸುವುದಿಲ್ಲ. ಅದಕ್ಕಾಗಿ ಸಂದರ್ಶನದಲ್ಲಿ ಸ್ಥಳಿಯ ಅಥವಾ ಸುತ್ತ ಮುತ್ತಲಿನ ಜಿಲ್ಲೆಗಳ ಅಭ್ಯರ್ಥಿಗಳಿಗೆ ಆದ್ಯತೆ ನೀಡಲು ಸೂಚಿಸಲಾಯಿತು.

**ವಿಷಯ ಸಂಖ್ಯೆ 5 :**

ಸ್ವಚ್ಚತೆ ಮತ್ತು ಭದ್ರತೆ ಕೆಲಸಗಳಿಗೆ ಹಿಂದಿನ ಆಡಳಿತ ಮಂಡಳಿಯ ಸಭೆಯ ಒಪ್ಪಿಗೆ ಪಡೆದು ಮತ್ತು ಸರ್ಕಾರದ ಪೂರ್ವಾನುಮತಿಯನ್ನು ಪಡೆದು ಪತ್ರಿಕಾ ಪ್ರಕಟಣೆ ಮಾಡಿ ಟೆಂಡರ್ ಮೂಲಕ ಅರ್ಹ ಸಂಸ್ಥೆಗೆ ದಿನಾಂಕ 01.05.2009ರಂದು ಗುತ್ತಿಗೆ ನೀಡಿದ್ದು, ಈ ಕುರಿತು ಸಂಸ್ಥೆಯ ನಿರ್ದೇಶಕರು ಸಭೆಗೆ ವಿವರಗಳನ್ನು ಸಲ್ಲಿಸಿದರು. ಸದರಿ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಗುತ್ತಿಗೆದಾರರು ಸಂಬಂಧಿಸಿದ ಕೆಲಸಗಾರರಿಗೆ ಚೆಕ್ ಮೂಲಕ ಹಣ ಸಂದಾಯ ಮಾಡಬೇಕು. ಸದರಿ ಬಿಡ್‌ದಾರರ ಪಟ್ಟಿಯಲ್ಲಿ ಕ್ರಮಸಂಖ್ಯೆ 4 ಕಡಿಮೆ ಇದ್ದು , ಇವರಿಗೆ ಆದೇಶ ಕೊಟ್ಟಿಲ್ಲ ಎಂಬುದಕ್ಕೆ ವಿವರದ ದರಗಳು ಕನಿಷ್ಠ ವೇತನ ಕಾಯ್ದೆಕ್ಕಿಂತ ಕಡಿಮೆ ಇದ್ದುದರಿಂದ ಇವರಿಗೆ ಕೊಟ್ಟಿಲ್ಲ. ಹಾಗೂ ಈ ಸಭೆಯಲ್ಲಿ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಹಾಜರಿದ್ದರೆಂದು ನಿರ್ದೇಶಕರು ವಿವರಿಸಿದರು. ಆದರೆ ಸದರಿ ಕಡಿಮೆ ಬಿಡ್‌ದಾರರನ್ನು ಕಮಿಟಿ ಕಾಯ್ದೆ ಪ್ರಕಾರ ಕಡಿಮೆ ಕೂಲಿದರಕ್ಕಿಂತ ಕಡಿಮೆ ಕೊಟ್ಟಿರುವುದಿಲ್ಲ. ಇವರನ್ನು ಪಟ್ಟಿಯಿಂದ ತೆಗೆದುಹಾಕುವ ಬಗ್ಗೆ ವಿವರ ನಮೂದಿಸಿಲ್ಲ. ಸಂಸ್ಥೆಯಲ್ಲಿ ಈಗಾಗಲೇ 81 ಜನ ಸಂಚಿತ ವೇತನದ ಮೇಲೆ ನೌಕರರಿದ್ದು ಇವರ ಸೇವೆಯನ್ನು ಸ್ವಚ್ಚತೆ ಮತ್ತು ಬದ್ರತೆ ಕಾರ್ಯಕ್ಕೆ ಪಡೆಯಬಹುದಾಗಿತ್ತು. ಇದರಿಂದ ಸಂಸ್ಥೆಗೆ ಮತ್ತು ಸರ್ಕಾರಕ್ಕೆ ದುಬಾರಿ ವೆಚ್ಚವಾಗುತ್ತದೆ ಎಂಬುದು ಅಭಿಪ್ರಾಯ ಪಡಲಾಯಿತು. ಆದುದರಿಂದ ವಿವರವಾದ ಮಾಹಿತಿಯನ್ನು ಒಳಗೊಂಡ ವರದಿಯನ್ನು ಪುನಃ ಸಲ್ಲಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ 6 :**

ಸಂಸ್ಥೆಯ ಆಸ್ಪತ್ರೆ ಮತ್ತು ಪ್ರಯೋಗಶಾಲೆಗಳಲ್ಲಿ ಅವಶ್ಯವಿರುವ ಭಾರತೀಯ ವೈದ್ಯಕೀಯ ಮಂಡಳಿ ನಿಯಮದಂತೆ ಭರ್ತಿ ಮಾಡಬೇಕಾದ ಹುದ್ದೆಯ ವಿವರಗಳನ್ನು ಪರಿಶೀಲಿಸಲಾಯಿತು.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಸರ್ಕಾರದಿಂದ ಮಂಜೂರಾದ ಹುದ್ದೆಗಳು | 2008 □ 09ನೇ ಸಾಲಿನಲ್ಲಿ ಭರ್ತಿ ಮಾಡಿದ ಹುದ್ದೆಗಳು | ಬೋಧಕ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಳೆ ಸಿಬ್ಬಂದಿ | ಒಟ್ಟು | ಖಾಲಿ ಹುದ್ದೆಗಳು |
|---|---|---|---|---|---|---|
| | **Staff Nurse : 255** | | | | | |
| 1 | Staff Nurse | 255 | 74 | 36 | 110 | 145 |
| | **Para Medical Workers : 106** | | | | | |
| 2 | Pharma Chemist | 01 | 0 | 06 | 06 | 0 |
| 3 | Speech Therapist | 03 | 0 | 0 | 0 | 03 |
| 4 | Physiotherapist | 02 | 0 | 01 | 01 | 01 |
| 5 | Ortho Therapist | 02 | 0 | 0 | 0 | 02 |
| 6 | Radiotherapist | 03 | 0 | 02 | 02 | 01 |
| 7 | Occupation Therapist | 02 | 0 | 0 | 0 | 02 |
| 8 | Councellor | 01 | 0 | 0 | 0 | 01 |
| 9 | Lady Health Visitor | 01 | 0 | 0 | 0 | 01 |
| 10 | Lab Technician / OT | 58 | 43 | 06 | 49 | 09 |
| 11 | Audiometry Technician | 01 | 0 | 0 | 0 | 01 |
| 12 | Radiographer | 08 | 03 | 01 | 04 | 04 |
| 13 | Dental Technician | 04 | 0 | 0 | 0 | 04 |
| 14 | Modular | 01 | 0 | 0 | 0 | 01 |
| 15 | Artist | 1 | 0 | 0 | 0 | 01 |
| 16 | MRW | 4 | 0 | 0 | 0 | 04 |
| 17 | Public Health Nurse | 03 | 0 | 0 | 0 | 03 |

| | | | | | | |
|---|---|---|---|---|---|---|
| 18 | Health Educator | 04 | 01 | 0 | 01 | 03 |
| 19 | Health Inspectors | 04 | 0 | 0 | 0 | 04 |
| 20 | Electro Cardiographer | 01 | 0 | 0 | 0 | 01 |
| 21 | Refractionist | 01 | 01 | 0 | 01 | 0 |
| 22 | Physist | 01 | 01 | 0 | 01 | 0 |
| ಒಟ್ಟು | | 106 | 49 | 16 | 65 | 46 |

ಈ ವಿಷಯವನ್ನು ಪರಿಶೀಲಿಸಿ ಸಂಸ್ಥೆಯೆ ಬೈಲಾ ಮತ್ತು ಸರ್ಕಾರದ ಆರೋಗ್ಯ ಇಲಾಖೆ ನೇಮಕಾತಿ ನಿಯಾಮವಳಿಗಳ ಅಡಿಯಲ್ಲಿ, ಸಾಮಾನ್ಯ ನಿಯಮಾವಳಿಗಳನ್ನು ರಚಿಸಿ ಪದ್ದತಿಗಳನ್ನು ಅಳವಡಿಸುವ ಪ್ರಸ್ತಾವನೆಯ ಅನುಮತಿಯೊಂದಿಗೆ ನೇಮಕಾತಿ ಕ್ರಮಕ್ಕೆ ಸೂಚಿಸಲಾಯಿತು.

**ವಿಷಯ ಸಂಖ್ಯೆ 7 :**

ಕಛೇರಿ ಆಡಳಿತ ನಿರ್ವಹಣೆಯನ್ನು ನೋಡಿಕೊಳ್ಳಲು ಸರ್ಕಾರದಿಂದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿರಸ್ತೆದಾರ್ / ಅಧಿಕ್ಷಕರು ಹುದ್ದೆಯ ಹಾಗು ಲೆಕ್ಕೆ ಪತ್ರಗಳನ್ನು ನೋಡಿಕೊಳ್ಳಲು ರಾಜ್ಯ ಲೆಕ್ಕ ಪತ್ರ ಇಲಾಖೆಯ ಅಧೀಕ್ಷಕರ ಹುದ್ದೆಯ ನೌಕರರನ್ನು ಎರವಲು ಸೇವೆಯ ಮೇಲೆ ಪಡೆಯಲು ಅನುಮತಿ ನೀಡಲಾಯಿತು.

**ವಿಷಯ ಸಂಖ್ಯೆ 8 :**

ಅ) ಈಗಾಗಲೇ ದೊರೆತ ಮಂಜೂರಾತಿ ಆದೇಶದ ಪ್ರಕಾರ ಈ ಕೆಳಗಿರುವ ಹುದ್ದೆಗಳು ಖಾಲಿ ಇವೆ. ಸಂಸ್ಥೆಯ ಪತ್ರ ವ್ಯವಹಾರದ ಕಾರ್ಯಕ್ರಮಗಳು, ಲೆಕ್ಕ ಪತ್ರ ನಿರ್ವಹಣೆಯ ಅವಶ್ಯವಿರುವ 40 ಲಿಪಿಕ / ಗಣಕ ಯಂತ್ರ ನಿವಾಹಕರ ಹುದ್ದೆ ನೇಮಕಾತಿ ಮಾಡಲು ಸಲ್ಲಿಸಿದ ವಿವರ ಪರಿಶೀಲಿಸಲಾಯಿತು. ಈಗಾಗಲೇ ಸಂಸ್ಥೆಯಲ್ಲಿ 22 ಜನ ಲಿಪಿಕ ಸಿಬ್ಬಂದಿ ಸಂಚಿತ ವೇತನದ ಮೇಲೆ ನೇಮಕಾತಿ ಮಾಡಲಾಗಿದೆ.

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಸರ್ಕಾರದಿಂಧ ಮಂಜೂರಾದ ಹುದ್ದೆಗಳು | ಖಾಲಿ ಹುದ್ದೆ |
|---|---|---|---|
| 1 | ಸ್ಟೋರ್ ಕೀಪರ್ / ಕ್ಲರ್ಕ್ | 22 | 22 |
| 2 | ರೆಕಾಡ್ ೯ ಕೀಪರ್ / ಕ್ಲರ್ಕ್ | 18 | 18 |
| ಒಟ್ಟು | | | 40 |

ನಿಯಮಾನುಸಾರ ಪತ್ರಿಕಾ ಪ್ರಕಟಣೆ ಮಾಡಿ ಸರ್ಕಾರದ ನಿಯಮ ಮತ್ತು ಮೀಸಲಾತಿ ನಿಯಮಗಳನ್ನು ಅನುಸರಿಸಿ ಖಾಲಿ ಇರುವ 40 ಲಿಪಿಕ / ಗಣಕ ಯಂತ್ರ ನಿವಾಹಕರು ಮತ್ತು ವಿವಿಧ ಬೋಧಕೇತರ ಸಿಬ್ಬಂಧಿಯನ್ನು ಸಂದರ್ಶನದ ಮೂಲಕ ತುಂಬಿಕೊಳ್ಳಲು ಅನುಮತಿ ನೀಡಲಾಯಿತು. ಇದೇ ನೇಮಕಾತಿ ಪ್ರಕ್ರಿಯೆಯಲ್ಲಿ ಹಾಗು ಹಾಲಿ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಅನುಭವದ ಆಧಾರದ ಮೇಲೆ ಮೊದಲ ಆದ್ಯತೆಯನ್ನು ನೀಡಿ ಪರಿಗಣಿಸಲು ಆಡಳಿತ ಮಂಡಳಿಯಲ್ಲಿ ಸೂಚಿಸಲಾಯಿತು.

ಆ) ಒಟ್ಟು 31 ಪ್ರಯೋಗಾಶಾಲ ಸಹಾಯಕರ ನೇಮಕಾತಿ ವಿಷಯವನ್ನು ಪರಿಶೀಲಿಸಲಾಯಿತು. ಈಗಾಗಲೇ 81 ಜನ ಅಟೆಂಡರ್ / ವಾಚ್ ಮನ್‌ರೆಂದು ಸಂಚಿತ ವೇತನದ ಮೇಲೆ ತಾತ್ಕಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದನ್ನು ಗಮನಿಸಲಾಯಿತು. ಸಂಸ್ಥೆಯಲ್ಲಿ ಈಗಾಗಲೇ ಒಟ್ಟು 157 ಬೋಧಕ ಸಿಬ್ಬಂಧಿ ನೇಮಕಾತಿಯಾಗಿದ್ದು 259 ಬೋಧಕೇತರ ಸಿಬ್ಬಂದಿ ನೇಮಕಾತಿಯಾಗಿದ್ದಾರೆ. ಬೋಧಕೇತರ ಸಿಬ್ಬಂಧಿಯಲ್ಲಿ 136 ಜನ ಸಂಚಿತ ವೇತನದಲ್ಲಿದ್ದು ಹಾಗು ಈ ಸಂಚಿತ ವೇತನದ ಸಿಬ್ಬಂಧಿಯಲ್ಲಿ 81 ಜನ ಡಿ ವರ್ಗದ ಸಿಬ್ಬಂದಿ ಇದ್ದಾರೆ. ಸದರಿ 81 ಜನರ ಪೈಕಿ ಖಾಲಿ ಇರುವ 31 ಪ್ರಯೋಗಶಾಲ ಸಹಾಯಕರ ಹುದ್ದೆಗೆ ನಿಯಮಾನುಸಾರ ನೇಮಕಾತಿ ಮಾಡಿ ನೇಮಕಾತಿಯಾಗದವರನ್ನು ಸೇವೆಯಿಂದ ತೆಗೆದು ಹಾಕಲು ಸೂಚಿಸಿದರು. ಸಂಚಿತ ವೇತನದ ನೇಮಕಾತಿಯು ತಮ್ಮ ಅವಧಿಯ ಕ್ರಮವಲ್ಲವೆಂದು ನಿರ್ದೇಶಕರು ಆಡಳಿತ ಮಂಡಳಿಗೆ ತಿಳಿಸಿರುವುದರ ಬಗ್ಗೆ ಸಮಗ್ರ ವರದಿ ಸಲ್ಲಿಸಲು ಸೂಚಿಸಲಾಯಿತು.

**ವಿಷಯ ಸಂಖ್ಯೆ 9 :**

ಸಂಸ್ಥೆಯಲ್ಲಿ ಈಗಾಗಲೇ ಇರುವ ಮೂಲಭೂತ ಸೌಕರ್ಯಗಳ ಬಗ್ಗೆ ಉದ್ದೇಶಿತ ಕಾಮಗಾರಿಗಳ ವಿವರಗಳನ್ನು ಪರಿಶೀಲಿಸಲಾಯಿತು.

ಸಂಸ್ಥೆಯಲ್ಲಿ ಈಗಾಗಲೇ ಇರುವ ಮೂಲಭೂತ ಸೌಕರ್ಯಗಳ ಬಗ್ಗೆ ಉದ್ದೇಶಿತ ಕಾಮಗಾರಿಗಳ ವಿವರಗಳನ್ನು ಪರಿಶೀಲಿಸಲಾಯಿತು. ಪ್ರಾರಂಭದಿಂದ ಈವರೆಗೆ ಸರ್ಕಾರದಿಂದ ಮಂಜೂರಿಯಾಗಿದ್ದು ವರ್ಷವಾರು ವಿವರ ಈ ಕೆಳಗಿನಂತಿದೆ.

ಈ ಸಂಸ್ಥೆಯಲ್ಲಿ ಒಟ್ಟು 130.02 ಎಕರೆ ಜಮೀನು ಹೊಂದಿದ್ದು ವಿವರ ಈ ಕೆಳಗಿನಂತಿದೆ.

| ಒಟ್ಟು ಜಮೀನಿನ ವಿವರ | | |
|---|---|---|
| ಸರ್ಕಾರಿ ಮೆಡಿಕಲ್ ಕಾಲೇಜು | ಜಮೀನು | ಒಡೆತನದ ರೀತಿ |
| ರಿಮ್ಸ ಜಿಲ್ಲಾ ಬೋಧಕ ಆಸ್ಪತ್ರೆ | 33.18 | ಸರ್ಕಾರದಿಂದ |
| ವೈದ್ಯಕೀಯ ಮಹಾವಿದ್ಯಾಲಯ | 30.04 | ಸರ್ಕಾರ (ಎ.ಪಿ.ಎಂ.ಸಿಯಿಂದ) |
| ಓಪೆಕ್ ಆಸ್ಪತ್ರೆ | 37.33 | ಸರ್ಕಾರ (ಎ.ಪಿ.ಎಂ.ಸಿಯಿಂದ ) |
| 1040 ಹಾಸಿಗೆಯುಳ್ಳ ಆಸ್ಪತ್ರೆ | 27.09 | ಭೂಸ್ವಾದಿನದ ಮುಖಾಂತರ |
| ಒಟ್ಟು | 130.02 | |

| ಹಂತವಾರು ಕಟ್ಟಡ ಕಾಮಗಾರಿ ವೆಚ್ಚ | | | | | | | |
|---|---|---|---|---|---|---|---|
| ಹಂತ | ಆಡಳಿತಾತ್ಮಕ ಅನುಮೋದನೆ | ಗುತ್ತಿಗೆದಾರರು | ಇಐಆರ್‌ಎಲ್ + ವರ್ಕ ಸ್ಲಿಪ್ | ಎಸ್ಕಲೇಶನ್ | ಒಟ್ಟು | ಸರ್ಕಾರದ ಅನುದಾನ | ಬಾಕಿ |
| ಮೊದಲನೇ ಹಂತ | 20 ಕೋಟಿ | ಹೈಯಗ್ರೀವ ಇನ್‌ಫ್ರಾಟೆಕ್ ಪ್ರಾಜೆಕ್ಟ್ ಲಿಮಿಟೆಡ್ | 2800.88 | 0.00 | 2807.00 | 2807.00 | 0.00 |
| ಎರಡನೇ ಹಂತ | 40 ಕೋಟಿ | | 4779.00 | 356.00 | 5135.00 | 4300.00 | 835.00 |
| ಒಟ್ಟು | | | | 356.00 | 7935.88 | 7107.00 | 835.00 |

**ಮೊದಲನೇ ಹಂತದ ಕಾಮಗಾರಿ ವಿವರ ಈ ಕೆಳಗಿನಂತಿದೆ :**

| ಕ್ರಮ ಸಂಖ್ಯೆ | ಕಟ್ಟಡಗಳ ವಿವರ | ಮಹಡಿಗಳು | ಕ್ಷೇತ್ರ |
|---|---|---|---|
| 1 | ವೈದ್ಯಕೀಯ ಕಾಲೇಜು ಕಟ್ಟಡ | ನೆಲ ಮಹಡಿ 1 & 2 | 16750 ಚ.ಮೀ |
| ಒಟ್ಟು | | | 16750 |
| | ವಿದ್ಯಾರ್ಥಿಗಳಿಗೆ ವಸತಿ ನಿಲಯ | ನೆಲ ಮಹಡಿ | 1254 ಚ.ಮೀ |
| | | ಒಂದನೆ ಮಹಡಿ | 1254 ಚ.ಮೀ |
| | ವಿದ್ಯಾರ್ಥಿನಿಯರಿಗೆ ವಸತಿ | ನೆಲ ಮಹಡಿ | 1254 ಚ.ಮೀ |
| | | ಒಂದನೇ ಮಹಡಿ | 1254 ಚ.ಮೀ |
| 3 | ವೈದ್ಯಾಧಿಕಾರಿಗಳಿಗೆ ವಸತಿ ನಿಲಯಗಳು | ನೆಲ ಮಹಡಿ | 852 ಚ.ಮೀ |
| | | ಒಂದನೇ ಮಹಡಿ | 852 ಚ.ಮೀ |
| ಒಟ್ಟು | | | 28740 |

ಎರಡನೇ ಹಂತದ ಕಾಮಗಾರಿ ವಿವರ ಈ ಕೆಳಗಿನಂತಿದೆ :

| ಕ್ರಮ ಸಂಖ್ಯೆ | ಕಟ್ಟಡಗಳ ವಿವರ | ಮಹಡಿಗಳು | ಕ್ಷೇತ್ರ |
|---|---|---|---|
| 1 | ವೈದ್ಯಕೀಯ ಕಾಲೇಜು ಕಟ್ಟಡ | ಮೂರನೇ ಮಹಡಿ + ಅಡಿಟೋರಿಯಮ್ | 6360 ಚ.ಮೀ |
| | 240 ವಿದ್ಯಾರ್ಥಿಗಳಿಗೆ | ಎರಡನೇ ಮಹಡಿಯಿಂದ ಐದನೇ ಮಹಡಿಯವರೆಗೆ | 1254 ಚ.ಮೀ ಪ್ರತಿ ಮಹಡಿಗೆ 5016 ಚ.ಮೀ |
| | 240 ವಿದ್ಯಾರ್ಥಿನಿಯರಿಗೆ | ಎರಡನೇ ಮಹಡಿಯಿಂದ ಐದನೇ ಮಹಡಿಯವರೆಗೆ | 1254 ಚ.ಮೀ ಪ್ರತಿ ಮಹಡಿಗೆ 5016 ಚ.ಮೀ |
| 3 | 32 ವೈದ್ಯಾಧಿಕಾರಿಗಳಿಗೆ ವಸತಿ ನಿಲಯಗಳು | ಎರಡನೇ ಮಹಡಿಯಿಂದ ಐದನೇ ಮಹಡಿಯವರೆಗೆ | 852 ಚ.ಮೀ ಪ್ರತಿ ಮಹಡಿಗೆ ಒಟ್ಟು 3408 ಚ.ಮೀ |
| 4 | ಗ್ರೂಪ್ ಸಿ ವಸತಿ ಗೃಹಗಳು (ಹೊಸ ನಿರ್ಮಾಣ) | ಪಾರ್ಕಿಂಗ್ ಹಾಗೂ ಎಂಟು ಮಹಡಿಗಳು | 329 ಚ.ಮೀ ಪ್ರತಿ ಮಹಡಿಗೆ ಒಟ್ಟು 2968 ಚ.ಮೀ |
| 5 | ಗ್ರೂಪ್ ಡಿ ವಸತಿ ಗೃಹಗಳು (ಹೊಸ ನಿರ್ಮಾಣ) | ಪಾರ್ಕಿಂಗ್ ಹಾಗೂ ಎಂಟು ಮಹಡಿಗಳು | 252 ಚ.ಮೀ ಪ್ರತಿ ಮಹಡಿಗೆ ಒಟ್ಟು 2025 ಚ.ಮೀ |
| ಒಟ್ಟು ಪ್ಲಿಂತ್ ಏರಿಯಾ | | | 3689 ಚ.ಮೀ |

ವೈದ್ಯಕೀಯ ಆಸ್ಪತ್ರೆ ಬ್ಲಾಕ್ ಎ ದಲ್ಲಿ ನೆಲಮಹಡಿ ಮತ್ತು ಒಂದನೇ ಮಹಡಿ ಕಾಮಗಾರಿ ಪೂರ್ತಿಯಾಗಿದ್ದು, ಬಾಕಿ ಕೆಲಸ ಪ್ರಗತಿಯಲ್ಲಿದೆ. ಈ ಕಾಮಗಾರಿಯಲ್ಲಿ ಒಟ್ಟು 278 ಹಾಸಿಗೆಯ ಸೌಲಭ್ಯವಾಗುತ್ತದೆ. ಇದರಲ್ಲಿ ಒಟ್ಟು ಐದು ಮಹಡಿ ಗಳಿವೆ. ಈ ಕಟ್ಟಡದ ಒಟ್ಟು ಕ್ಷೇತ್ರ 274057 ಚದರ ಅಡಿ ಆಗುತ್ತವೆ. 520 ಹಾಸಿಗೆಯುಳ್ಳ ಆಸ್ಪತ್ರೆಗೆ ಈಗಾಗಲೇ 1211.87 ಲಕ್ಷಗಳು ಪಾವತಿಯಾಗಿದ್ದು ಭೂಸ್ವಾದಿನ ವೆಚ್ಚ ರೂಪಾಯಿ 2.034 ಲಕ್ಷ ಆಗಿರುತ್ತದೆ.

ಈ ಎಲ್ಲಾ ಕಟ್ಟಡಗಳಿಗೆ ರೂ. 8700 ಲಕ್ಷ ವೆಚ್ಚವಾಗಿದ್ದು ಒಟ್ಟು 7,7,54,411 ಚದರಡಿ ಕಟ್ಟಡ ನಿರ್ಮಾಣವಾಗಿದ್ದು ಒಂದು ಚದರಡಿಗೆ ರೂಪಾಯಿ 1121.94 ವೆಚ್ಚವಾಗುತ್ತದೆ.

ಸದರಿ ಕಾಮಗಾರಿಗಳ ವೆಚ್ಚ ಮತ್ತು ಬೌತಿಕ ಕಟ್ಟಡಗಳ ಕುರಿತು ಈ ಕೆಳಗಿನಂತೆ ಕ್ರಮಕ್ಕೆ ಸೂಚಿಸಿದೆ. ಜಮೀನಿನ ಎಲ್ಲಾ ದಾಖಲಾತಿಗಳನ್ನು ಸಂಸ್ಥೆಯಲ್ಲಿ ಹೊಂದತಕ್ಕದ್ದು ಹಾಗು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಈಡೀ ಕ್ಷೇತ್ರದ ಒಟ್ಟು ಯೋಜನೆಯನ್ನು ಮಾಡಿ ಅದರಂತೆ ನಕಾಶೆಗಳನ್ನು ಸಿದ್ದಪಡಿಸಿ ವರದಿ ಸಲ್ಲಿಸುವುದು ಹಾಗು ಕ್ರಮ ಜರುಗಿಸುವುದು.

ಒಂದನೇ ಹಂತದ ಕಾಮಗಾರಿಯಲ್ಲಿ 20 ಕೋಟಿ ಆಡಳಿತಾತ್ಮಕ ಮತ್ತು ತಾತ್ರಿಕ ಅನುಮತಿ ಇದ್ದು ಹೆಚ್ಚಿನ ವಸ್ತುಗಳ ದರಪಟ್ಟಿ , ಕಾರ್ಯಹೆಚ್ಚಳ ಮತ್ತು ಬೆಲೆ ಏರಿಕೆ ಸೇರಿ 28 ಕೋಟಿ ವೆಚ್ಚವಾಗಿರುತ್ತದೆ. ಎರಡನೇ ಹಂತದ ಹೆಚ್ಚಿನ ಕಾಮಗಾರಿಯಲ್ಲಿ 40 ಕೋಟಿ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮತಿಯಿದ್ದು, ಗುತ್ತಿಗೆ ಮೊತ್ತ ಹೆಚ್ಚಳ ವಸ್ತುಗಳ ದರಪಟ್ಟಿ, ಕಾರ್ಯ ಹೆಚ್ಚಳ & ಬೆಲೆ ಏರಿಕೆ ಸೇರಿ 52 ಕೋಟಿ. ಹೀಗೆ 60 ಕೋಟಿ ಮೂಲ ಅಂದಾಜಿಗೆ ಸುಮಾರು 80 ಕೋಟಿಯೆಷ್ಟು ವೆಚ್ಚವಾಗಿದ್ದು ಈ 20 ಕೋಟಿ ಹೆಚ್ಚಳಕ್ಕೆ ವಿವರಗಳನ್ನು ಕೇಳಲಾಯಿತು. ಇದಕ್ಕೆ ಲೋಕೋಪಯೋಗಿ ಇಲಾಖೆಯ ಕಾರ್ಯ ಪಾಲಕ ಅಭಿಯಂತರರು & ಸಹಾಯಕ ಕಾರ್ಯ ಪಾಲಕ ಅಭಿಯಂತರರು ಈ ರೀತಿ ವಿವರಣೆಗಳನ್ನು ನೀಡಿದರು. ಮೂಲ ಅಂದಾಜು ಪಟ್ಟಿ ಪ್ರಕಾರ ಇದ್ದ ವಸ್ತುಗಳು ಅಂದರೆ ಹಾಸಿಗೆ

ಕಲ್ಲುಗಳು, ಕಿಟಕಿ ಸರಳುಗಳು, ಸಿಮೆಂಟ್ ಮಿಶ್ರಣಗಳಲ್ಲಿ ವ್ಯತ್ಯಾಸ, ವಿನ್ಯಾಸದಲ್ಲಿ ಬದಲಾವಣೆ, ಬೆಲೆ ಹೆಚ್ಚಳ, ಕಪ್ಪು ಜವಳು ಎರೆಮಣ್ಣಿನಲ್ಲಿ ಬುನಾದಿಗೆ ಹೆಚ್ಚಾದ ಕಾಮಗಾರಿಗಳಿಂದಾಗಿ ವೆಚ್ಚವಾಗಿದೆ. ಈ ಎಲ್ಲಾ ಹೆಚ್ಚುವರಿ ವೆಚ್ಚಕ್ಕೆ ಸಂಬಂಧಿಸಿದ ಪ್ರಾಧಿಕಾರದಿಂದ ಮಂಜೂರಿ ದೊರೆತು ಸರ್ಕಾರಕ್ಕೆ ವರದಿ ಮಾಡಿದೆ. ಮತ್ತು ಗುಣಮಟ್ಟ ನಿಯಂತ್ರಣಕ್ಕೆ ಪ್ರಯೋಗಶಾಲೆ ಹೊಂದಿದ್ದು ಇಲ್ಲಿ ಪರೀಕ್ಷೆ ಮಾಡುತ್ತಿದ್ದು ಹಾಗು ತಾಂತ್ರಿಕ ಕಾಲೇಜಿನಿಂದ ಪರಿಕ್ಷೇ ಮಾಡಲಾಗುತ್ತಿದೆ. ಗುಣಮಟ್ಟ ನಿಯಂತ್ರಣಕ್ಕೆ ಲೋಕೋಪಯೋಗಿ ಇಲಾಖೆಯ ಪ್ರತ್ಯೇಕ ವಿಭಾಗವಿದೆ ಎಂದು ಲೋಕೋಪಯೋಗಿ ಅಭಿಯಂತರರು ವಿವರಿಸಿದರು. ಆದರೆ ಸದರಿ ವೆಚ್ಚ ಹೆಚ್ಚಳಕ್ಕೆ ಸಮರ್ಥಕವಾದ ವಿವರಣೆಯ ಹಾಗು ಗುಣಮಟ್ಟಗಳ ಧೃಡಿಕೃತ ವರದಿಗಳನ್ನು ಸಂಬಂಧಿಸಿದ ಮುಖ್ಯ ಅಭಿಯಂತರರಿಂದ ಧೃಡಿಕರಿಸಿ ಸಲ್ಲಿಸುವಂತೆ ಹಾಜರಿದ್ದ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಯಿತು.

ಸಂಸ್ಥೆಯ ಉದ್ದೇಶಿತ ಕಾಮಗಾರಿಗಳ ವಿವರಗಳನ್ನು ಪರಿಶೀಲಿಸಲಾಯಿತು. ಭಾರತೀಯ ವೈದ್ಯಕೀಯ ಪರಿಷತ್ ನಿಯಮಗಳ ಪ್ರಕಾರ ಉದ್ದೇಶಿತ ಕಾಮಗಾರಿಗಳಲ್ಲಿ ಕಟ್ಟಡಗಳ ಆದ್ಯತೆಯ ಪಟ್ಟಿ ತಯಾರಿಸಿ ಅವಶ್ಯಕತೆನುಸಾರ ಬೇಕಾದ ಕಟ್ಟಡಗಳನ್ನು ಆಯ್ಕೆ ಮಾಡಿ ದರ ಪಟ್ಟಿಗಳನ್ನು ಪರಿಶೀಲಿಸಿ ಗುಣಮಟ್ಟ ಕಾಯ್ದುಕೊಂಡು ಅನಗತ್ಯ ವೆಚ್ಚವಾಗದಂತೆ ವರದಿ ಸಿದ್ಧ ಪಡಿಸಿ ಸಂಬಂಧಿಸಿದ ಮುಖ್ಯ ಅಭಿಯಂತರರಿಂದ ಧೃಡಿಕೃತ ವರದಿಯನ್ನು ಸಲ್ಲಿಸಲು ಹಾಜರಿದ್ದ ಕಾರ್ಯಪಾಲ ಅಭಿಯಂತರರಿಗೆ ಸೂಚಿಸಲಾಯಿತು. ಹಾಗು ಈ ಬಗ್ಗೆ ಸ್ಥಳೀಯವಾಗಿ ಕಾಮಗಾರಿ ಸಭೆ ಕರೆದು ವರದಿಯನ್ನು ಸಲ್ಲಿಸುವಂತೆ ನಿರ್ದೇಶಕರಿಗೆ ಸೂಚಿಸಲಾಯಿತು.

**ವಿಷಯ ಸಂಖ್ಯೆ** 10 :

ಬರುವ ಭಾರತೀಯ ವೈದ್ಯಕೀಯ ಮಂಡಳಿಯ ಅನುಮತಿ ನವೀಕರಣಕ್ಕೆ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಅವಶ್ಯವಿರುವ ವೈದ್ಯಕೀಯ ಉಪಕರಣಗಳು, ಪೀಠೋಪಕರಣಗಳು, ರಸಾಯನಿಕಗಳು ಹಾಗು ವೈದ್ಯಕೀಯ ಪುಸ್ತಕಗಳ ಇತ್ಯಾದಿ ಕುರಿತು ಸಲ್ಲಿಸಿದ ಪಟ್ಟಿಯ ಒಟ್ಟು ಮೊತ್ತ ರೂ. 60461600 ಇದ್ದು ಈ ಬಗ್ಗೆ ಸಂಸ್ಥೆಯಲ್ಲಿ ವಿವಿಧ ವಿಭಾಗಳ ಮುಖ್ಯಸ್ಥರು ಶಿಫಾರಸ್ಸು ಮಾಡಿದ ವರದಿ ಹಿನ್ನಲೆಯಲ್ಲಿ ಈ ಪಟ್ಟಿ ಸಿದ್ದಪಡಿಸಲಾಗಿರುತ್ತದೆ. ಇವುಗಳನ್ನು ಪರಿಶೀಲಿಸಿ ಕರ್ನಾಟಕ ಪಾರದರ್ಶಕ ಕಾಯ್ದೆ ಟೆಂಡರ್ ಗಳ ಮೂಲಕ ನಿಯಮಾನುಸಾರ ಕ್ರಮಕೈಗೊಳ್ಳುವುದು ಮತ್ತು ಖರೀದಿ ಸಮಿತಿಗೆ ಮಂಡಿಸಿ ಖರೀದಿಸಲು ಅನುಮತಿ ನೀಡಲಾಯಿತು.

**ವಿಷಯ ಸಂಖ್ಯೆ** 11:

ಆಸ್ಪತ್ರೆಯ ತಂತ್ರಾಂಶ ನಿರ್ವಹಣಾ ಪದ್ಧತಿಯು ಹಾಲಿ ಮೊತ್ತವು ಹೆಚ್ಚಾಗಿದ್ದು, ಇದನ್ನು ಪರಿಶೀಲಿಸಿ ಖರೀದಿ ಸಮಿತಿಯಲ್ಲಿ ನಿಯಮಾನುಸಾರ ದರ ಪಟ್ಟಿ ಪರೀಶಿಲಿಸಿ ಈ ಸಮಿತಿಯ ಶಿಫಾರಸ್ಸಿನ ಮೇರೆಗೆ ನಿಯಮಾನುಸಾರ ಪತ್ರಿಕಾ ಪ್ರಕಟಣೆ ಕರೆದು ಪಾರದರ್ಶಕ ನಿಯಮದಡಿ ಟೆಂಡರ್ ಕ್ಕರೆಯಲು ಸೂಚಿಸಲಾಯಿತು. ಅದಲ್ಲದೆ ಈ ಬಗ್ಗೆ ಸರ್ಕಾರದ ಅಂಗ ಸಂಸ್ಥೆಯಾದ ಕಿಯೋನಿಕ್ಸ್ ರವರು ಸಹ ತಾಂತ್ರಿಕ ನಿರ್ವಹಣ ಪದ್ಧತಿ ಕ್ರಮ ಕೈಗೊಂಡಿದ್ದು ಆ ಸಂಸ್ಥೆ ಸಂಪರ್ಕಿಸಲು ಕ್ರಮಕ್ಕೆ ಸೂಚಿಸಲಾಯಿತು.

**ವಿಷಯ ಸಂಖ್ಯೆ** 12 :

ಆಸ್ಪತ್ರೆಯ ಅವರಣದಲ್ಲಿ ಸೌರ ವಿದ್ಯುತ್ ದ್ವೀಪಗಳ ವ್ಯವಸ್ಥೆ ಕುರಿತು ಸರ್ಕಾರದ ಸಂಸ್ಥೆಯಾದ ಎಂ.ಎಸ್. ಐ.ಎಲ್ ಹಾಗು ಕೆ. ಆರ್. ಐ. ಡಿ. ಎಲ್ ಸಂಸ್ಥೆ ಸಂಪರ್ಕಿಸಿ ಅಂದಾಜು ಪಟ್ಟಿ ತಯಾರಿಸಿ ಖರೀದಿ ಸಮಿತಿ ಮೂಲಕ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ.

**ವಿಷಯ ಸಂಖ್ಯೆ** 13:

ವಿಷಯ ಸೂಚಿ 8 ಅ ರಲ್ಲಿ ನಿರ್ಧರಿಸಿದಂತೆ ಸದರಿ ಸಿಬ್ಬಂದಿಯವರ ಮನವಿಗೆ ಮೊದಲ ಆದ್ಯತೆ ನೀಡಲು ಅನುಮತಿ ನೀಡಲಾಯಿತು.

**ವಿಷಯ ಸಂಖ್ಯೆ** 14 :

1) ಆಸ್ಪತ್ರೆಯ ಘನ ತ್ಯಾಜ್ಯ ವಸ್ತುಗಳ ವಿಲೇವಾರಿಗೆ ಕ್ರಮ ಕೈಗೊಳ್ಳು ಸೂಚಿಸಲಾಯಿತು. ನಿಯಮಾನುಸಾರ ಆಸ್ಪತ್ರೆಯಿಂದ ಹೊರ ಹಾಕುತ್ತಿರುವ ನೀರನ್ನು ಶುದ್ಧೀಕರಿಸಿ ಹೊರಗೆ ಬಿಡಲು ಕ್ರಮದ ಬಗ್ಗೆ ಕರ್ನಾಟಕ ನೀರು ಸರಬಾರಾಜು ಮತ್ತು ಒಳ ಚರಂಡಿ ಮಂಡಳಿಯ ಸಹಯೋಗದೊಂದಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

2) ಮಳೆ ನೀರನ್ನು ಕೊಯಲು ಮಾಡಲು ಅಂದರೆ ಮಳೆ ನೀರನ್ನು ಸಂಗ್ರಹಿಸಿ ಶೇಖರಿಸಿ ಬಳಕೆ ಮಾಡುವ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸೂಚಿಸಲಾಯಿತು.

3) ನಿರ್ದೇಶಕರು ಸಂಸ್ಥೆಯಲ್ಲಿ ಕನ್ನಡೇತರ ಬೋಧಕ ಸಿಬ್ಬಂದಿಯವರು ಸರ್ಕಾರದ ಇಲಾಖೆಯ ಪರೀಕ್ಷೆಗಳನ್ನು ಮತ್ತು ಕನ್ನಡ ವಿಷಯ ಪರೀಕ್ಷೆ ಪಾಸಾಗದೆ ಇದ್ದು ಅವರ ನಿರೀಕ್ಷಾ ಅವಧಿಯನ್ನು ಪೂರ್ಣಗೊಳಿಸುವ ಬಗ್ಗೆ ಕೋರಿದಾಗ ಇಲಾಖಾ ಪರೀಕ್ಷೆಗಳು ಮತ್ತು ಕನ್ನಡ ಓದು ಬರಹ ಕಲಿಕೆ ಕಡ್ಡಾಯವಾಗಿದ್ದು. ಈ ಕರಾರುಗಳನ್ನು ಮಾಡದೇ ನಿರೀಕ್ಷಾ ಅವಧಿ ಮುಕ್ತಾಯ ಘೋಷಣೆಗೆ ನಿರ್ದೇಶಕರು ಆದೇಶ ಹೊರಡಿಸುವಂತಿಲ್ಲವೆಂದು ಹಾಗು ಕನ್ನಡೇತರ ಬೋಧಕ ಸಿಬ್ಬಂದಿಯವರಿಗೆ ಕನ್ನಡ ಕಲಿಕೆಗೆ ಮತ್ತು ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಪಠ್ಯ ಹಾಗು ಪಾಠಕ್ಕೆ ಕ್ರಮ ಜರುಗಿಸಲು ಸೂಚಿಸಲಾಯಿತು.

4) ಭಾರತೀಯ ವೈದ್ಯಕೀಯ ಪರಿಷತ್‌ನ ಅವಶ್ಯಕತೆಯನುಸಾರ ಕೈಗೊಳ್ಳ ಬೇಕಾದ ಕ್ರಮದ ಬಗ್ಗೆ ಒಂದು ಯೋಜನೆ ಸಿದ್ಧ ಪಡಿಸಿ ಮುಂಚಿತವಾಗಿಯೇ ನಿಯಮಾನುಸಾರ ಕ್ರಮ ಕೈಗೊಂಡು ವರದಿ ಸಲ್ಲಿಸಲು ಸೂಚಿಸಲಾಯಿತು.

5) ಭಾರತೀಯ ವೈದ್ಯಕೀಯ ಮಂಡಳಿಯ ನಿಯಮಾವಳಿ ಮತ್ತು ಸರ್ಕಾರಿ ಮಂಜೂರಾತಿ ಪ್ರಕಾರ ಖಾಲಿ ಇರುವ ಮುಖ್ಯ ಗ್ರಂಥಪಾಲಕರು (1), ಸಹಾಯಕ ಗ್ರಂಥಪಾಲಕರು (2), ವೈದ್ಯಕೀಯ ಸಮಾಜ ಕಾರ್ಯ ಕರ್ತರು (10), ಎಂ.ಆರ್.ಡಬ್ಲ್ಯೂ (4), ಶೀಘ್ರಲಿಪಿಗಾರರು (18) ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ನಿರ್ದೇಶಕರ ಕೋರಿಕೆಯಂತೆ ಅನುಮತಿ ನೀಡಲಾಯಿತು.

ವಂದನೆಗಳೊಂದಿಗೆ ಆಡಳಿತ ಮಂಡಳಿ ಸಭೆಯು ಮುಕ್ತಾಯವಾಯಿತು.

(ಶ್ರೀ ವಿ. ಉಮೇಶ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),
ಹಾಗು ಉಪಾಧ್ಯಕ್ಷರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.

(ಶ್ರೀ ರಾಮಚಂದ್ರಗೌಡ)
ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ.
ಹಾಗೂ
ಅಧ್ಯಕ್ಷರು,
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.
ರಾಮಚಂದ್ರ ಗೌಡ
ವೈದ್ಯಕೀಯ ಶಿಕ್ಷಣ ಸಚಿವರು